**ಎಫ್. ನಂ. 14011/4/2017-ಎಚ್ ಆರ್ ಡಿ**

**ಭಾರತ ಸರ್ಕಾರ**

**ವಿದ್ಯುನ್ಮಾನ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವಾಲಯ**

1.0 **ಯೋಜನೆಯ ಹೆಸರು:** ಪ್ರಧಾನ ಮಂತ್ರಿ ಗ್ರಾಮೀಣ ಡಿಜಿಟಲ್ ಸಾಕ್ಷರತ ಅಭಿಯಾನ

2.0 **ಡಿಜಿಟಲ್ ಸಾಕ್ಷರತೆಯ ವ್ಯಾಖ್ಯೆ:**

ಡಿಜಿಟಲ್ ತಂತ್ರಜ್ಞಾನವನ್ನು ಅರ್ಥಮಾಡಿಕೊಂಡು ವೈಯಕ್ತಿಕ ಹಾಗೂ ಸಾಮಾಜಿಕ ಜೀವನಮಟ್ಟವನ್ನು ಸುಧಾರಿಸಿಕೊಳ್ಳುವ ಪ್ರಕ್ರಿಯೆಯನ್ನೇ ಡಿಜಿಟಲ್ ಸಾಕ್ಷರತೆ ಎನ್ನಬಹುದು.

3.0 **ಉದ್ದೇಶಗಳು:**

ಡಿಜಿಟಲ್ ಸಾಕ್ಷರತೆ ಯೋಜನೆಯ ಮುಖ್ಯ ಉದ್ದೇಶವೆಂದರೆ, ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ನೆಲೆಸಿರುವ ಸುಮಾರು 6 ಕೋಟಿ ಜನರನ್ನು ಡಿಜಿಟಲ್ ಸಾಕ್ಷರರನ್ನಾಗಿಸುವುದು, ಶೇ.40% ಗ್ರಾಮೀಣ ಕುಂಟುಂಬದಲ್ಲಿ ತಲಾ ಒಬ್ಬರನ್ನು ಡಿಜಿಟಲ್ ಸಾಕ್ಷರನ್ನಾಗಿಸುವ ಉದ್ದೇಶ ಹೊಂದಿದೆ.

ಗ್ರಾಮೀಣ ಪ್ರದೇಶದಲ್ಲಿ ನೆಲೆಸಿರುವ ಜನರಿಗೆ ಕಂಪ್ಯೂಟರ್/ ಡಿಜಿಟಲ್ ಉಪಕರಣಗಳ(ಟ್ಯಾಬ್ಲೇಟ್ಸ್,ಸ್ಮಾರ್ಟ್ ಫೋನ್ ಇತ್ಯಾದಿ) ಬಳಸಲು ಸೂಕ್ತ ತರಬೇತಿ ನೀಡುವುದು, ಇಂಟರ್‌ನೆಟ್ ಬಳಸುವ ಮೂಲಕ ಇ-ಮೇಲ್ ಕಳಿಸುವುದು, ಸರ್ಕಾರಿ ಸೇವೆಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳುವಷ್ಟು ಸಮರ್ಥರನ್ನಾಗಿಸುವುದು ಹಾಗೂ ಡಿಜಿಟಲ್ ಪಾವತಿಯನ್ನು ಪ್ರೋತ್ಸಾಹಿಸುವಂತೆ ಜನರನ್ನು ಸಾಕ್ಷರರನ್ನಾಗಿಸಿ ಆ ಮೂಲಕ ದೇಶಕಟ್ಟುವ ಕೆಲಸದಲ್ಲಿ ಕೈಜೋಡಿಸುವಂತೆ ಮಾಡುವುದು ಈ ಯೋಜನೆಯ ಮುಖ್ಯ ಗುರಿಯಾಗಿದೆ. ಗ್ರಾಮೀಣ ಜನಸಂಖ್ಯೆಯಲ್ಲಿ ಸಮಾಜದಿಂದ ಕಡೆಗಣಿಸಲ್ಪಟ್ಟಿರುವ ಅದರಲ್ಲೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಬಡತನ ರೇಖೆಗಿಂತ ಕೆಳಗಿರುವ ಮಂದಿ, ಮಹಿಳೆಯರು, ವಿಕಲಚೇತನರು ಮತ್ತು ಅಲ್ಪಸಂಖ್ಯಾತರನ್ನು ಗುರಿಯಾಗಿಸಿಕೊಂಡು ಸಂಪರ್ಕ ಸೇತುವೆಯಾಗಿ ಈ ಯೋಜನೆ ಕಾರ್ಯನಿರ್ವಹಿಸಲಿದೆ.

4.0 ಅನುಷ್ಠಾನಗೊಳಿಸುವ ಸಂಸ್ಥೆಗಳು(ಏಜೆನ್ಸಿಗಳು):

ಈ ಯೋಜನೆಯು ಕೇಂದ್ರ ಮಾಹಿತಿ-ತಂತ್ರಜ್ಞಾನ ಇಲಾಖೆಯ ಮಾರ್ಗದರ್ಶನದಲ್ಲಿ ಸಿಎಸ್‌ಸಿ ಇ-ಆಡಳಿತ ಸೇವೆಗಳು ಇಂಡಿಯಾ ಲಿಮಿಟೆಡ್, 1956ರ ಕಂಪನಿ ಆ್ಯಕ್ಟ್ ಅನ್ವಯ ಸ್ಥಾಪಿತವಾದ ಸ್ಪೆಷಲ್ ಫರ್ಪಸ್ ವೆಹಿಕಲ್(ಎಸ್‌ಪಿವಿ) ಸಂಸ್ಥೆಯು ರಾಜ್ಯ ಹಾಗೂ ಕೇಂದ್ರಡಳಿತ ಪ್ರದೇಶದ ಆಡಳಿತದ ಸಹಕಾರದೊಂದಿಗೆ ಕಾರ್ಯನಿರ್ವಹಿಸಲಿದೆ.

**5.0 ಅನುಷ್ಠಾನದ ಅವಧಿ:**

ಈ ಯೋಜನೆಯು ಮಾರ್ಚ್ 31, 2019ರವರೆಗೆ ಕಾರ್ಯನಿರ್ವಹಿಸಲಿದೆ.

**6.0 ಯೋಜನೆಯ ಫಲಾನುಭವಿಗಳು:**

*** ಅರ್ಹ ಕುಟುಂಬ:**

ಒಂದು ಕುಟುಂಬವೆಂದರೆ ಯಜಮಾನ, ಆತನ ಸಂಗಾತಿ, ಮಕ್ಕಳು ಹಾಗೂ ಪೋಷಕರನ್ನೊಳಗೊಂಡ ಸಮಾಜದ ಅತ್ಯಂತ ಚಿಕ್ಕ ಘಟಕವೆನ್ನಬಹುದು. ಇಂತಹ ಕುಟುಂಬದಲ್ಲಿ ಯಾವೊಬ್ಬ ಸದಸ್ಯನೂ ಡಿಜಿಟಲ್ ಸಾಕ್ಷರನಾಗಿಲ್ಲದಿದ್ದರೆ ಅವರು ಈ ಯೋಜನೆಗೆ ಅರ್ಹರಾಗುತ್ತಾರೆ.

*** ಪ್ರವೇಶ ಮಾನದಂಡ:**

a) ಫಲಾನುಭವಿಯು ಡಿಜಿಟಲ್ ಅನಕ್ಷರಸ್ಥನಾಗಿರಬೇಕು.

b) ಅಂತಹ ಕುಟುಂಬದ ಒಬ್ಬ ಸದಸ್ಯ ಈ ಯೋಜನೆಯಲ್ಲಿ ತರಬೇತಿ ಪಡೆಯಲು ಅರ್ಹನಾಗುತ್ತಾನೆ.

c) ವಯಸ್ಸಿನ ಮಿತಿ: 14-60 ವರ್ಷಗಳು

*** ಇವರಿಗೆ ಹೆಚ್ಚು ಆದ್ಯತೆ:**

ಅ)ಸ್ಮಾರ್ಟ್ ಫೋನ್ ಬಳಸದಿರುವವರು, ಅಂತ್ಯೋದಯ ಫಲಾನುಭವಿ ಕುಟುಂಬ, ಕಾಲೇಜಿನಿಂದ ಹೊರಗುಳಿದವರು, ವಯಸ್ಕರ ಸಾಕ್ಷರತೆ ಮಿಷನ್‌ನಲ್ಲಿ ಭಾಗವಹಿಸಿದವರು.

ಬ) ಕಂಪ್ಯೂಟರ್/ಐಸಿಟಿ ತರಬೇತಿ ದೊರಕದ 9ರಿಂದ 12ನೇ ತರಗತಿಯ ಶಾಲಾ ವಿದ್ಯಾರ್ಥಿಗಳು.

ಕ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಬಿಪಿಎಲ್ ಫಲಾನುಭವಿಗಳು, ಮಹಿಳೆಯರು, ವಿಕಲ ಚೇತನರು ಮತ್ತು ಅಲ್ಪಸಂಖ್ಯಾತರಿಗೆ ಹೆಚ್ಚಿನ ಆಧ್ಯತೆ ನೀಡಲಾಗುತ್ತದೆ.

ಡ) ಸಿಎಸ್‌ಸಿ-ಎಸ್‌ಪಿವಿಯ ಸಕ್ರಿಯ ಸಹಯೋಗಗಳು, ಗ್ರಾಮ ಪಂಚಾಯತ್ ಮತ್ತು ಬ್ಲಾಕ್ ಡೆವಲಪ್‌ಮೆಂಟ್ ಆಫಿಸರ್(ಕ್ಷೇತ್ರ ಅಭಿವೃದ್ಧಿ ಅಧಿಕಾರಿಗಳು)ಗಳ ಸಹಯೋಗದಲ್ಲಿ ಫಲಾನುಭವಿಗಳನ್ನು ಗುರುತಿಸಲಾಗುತ್ತದೆ. ಇಂತಹವರನ್ನು ಆಯ್ಕೆ ಮಾಡಿದ ನಂತರ ಯೋಜನೆಯ ಚೌಕಟ್ಟಿನಲ್ಲಿ ಬರುತ್ತಾರೆ.

**7.0 ಹಿನ್ನೆಲೆ:**

ಭಾರತೀಯ ಸಮಾಜವನ್ನು ಡಿಜಿಟಲ್ ಆಗಿ ಸದೃಢಗೊಳಿಸುವ, ಆರ್ಥಿಕ ಜ್ಞಾನ ಬೆಳೆಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಡಿಜಿಟಲ್ ಇಂಡಿಯಾ ಕಾರ್ಯಕ್ರಮವನ್ನು ಜಾರಿಗೊಳಿಸಿದೆ. ಈ ಕಾರ್ಯಕ್ರಮವು ಇ-ಆಡಳಿತದ ವಿವಿಧ ಯೋಜನೆಗಳನ್ನು ಜನರಿಗೆ ಅರ್ಥೈಸುವಂತೆ ಮಾಡುವುದು, ಆ ಮೂಲಕ ಸಾರ್ವಜನಿಕರು ಸಹಭಾಗಿತ್ವದಲ್ಲಿ ಸರ್ಕಾರದ ಹೊಣೆಗಾರಿಕೆಯನ್ನು ಹೆಚ್ಚಿಸುವಂತೆ ಮಾಡುವುದಾಗಿದೆ. ದೇಶದ ಮೂಲೆ-ಮೂಲೆಯಲ್ಲಿರುವ ಕೆಳಸ್ಥರದ ಪ್ರತಿಯೊಬ್ಬ ಪ್ರಜೆಯೂ ಡಿಜಿಟಲ್ ಸೇವೆಗಳನ್ನು/ ತಂತ್ರಜ್ಞಾನಗಳನ್ನು ಬಳಸಿಕೊಳ್ಳಲು ಸಮರ್ಥರಾದಾಗ ಮಾತ್ರ ಡಿಜಿಟಲ್ ಇಂಡಿಯಾ ಕಾರ್ಯಕ್ರಮ ಯಶಸ್ವಿಯಾಗಲಿದೆ. ದೇಶದ ಸಾರ್ವತ್ರಿಕ ಡಿಜಿಟಲ್ ಸಾಕ್ಷರತೆಯು ಗ್ರಾಮೀಣ ಭಾರತದ ಕಡ್ಡಾಯ ಭಾಗವಹಿಸುವಿಕೆಯನ್ನೊಳಗೊಂಡಿದೆ.

ದೇಶದ ಜನರಲ್ಲಿ ಡಿಜಿಟಲ್ ಸಾಕ್ಷರತೆ ಸಾಧಿಸಲು ರಾಷ್ಟ್ರೀಯ ಡಿಜಿಟಲ್ ಸಾಕ್ಷರತಾ ಮಿಷನ್(NDLM), ಮತ್ತು ಡಿಜಿಟಲ್ ಸಾಕ್ಷರತಾ ಮಿಷನ್((DISHA) ಎಂಬ 2 ಕಾರ್ಯಕ್ರಮಗಳಿಗೆ ಸರ್ಕಾರ ಅನುಮೋದನೆ ನೀಡಿದೆ. ಈ ಎರಡು ಯೋಜನೆಗಳನ್ನು ಸಿಎಸ್‌ಸಿ-ಎಸ್‌ಪಿವಿ ಮೇಲ್ವಿಚಾರಣೆ ನಡೆಸುತ್ತದೆ. ಈ ಎರಡು

ಯೋಜನೆಯಿಂದ ಡಿಸೆಂಬರ್ 2016ರಿಂದ ಡಿಸೆಂಬರ್ 2018ರೊಳಗಾಗಿ 52.5 ಲಕ್ಷ ಮಂದಿಗೆ ಡಿಜಿಟಲ್ ಸಾಕ್ಷರನ್ನಾಗಿಸಿ ಪ್ರಮಾಣ ಪತ್ರ ವಿತರಿಸುವ ಗುರಿಯನ್ನು ಈ ಕಾರ್ಯಕ್ರಮ ಹೊಂದಿದೆ.

2016-17ರಲ್ಲಿ ಬಜೆಟ್ ಮಂಡಿಸುವಾಗ ಮಾನ್ಯ ಹಣಕಾಸು ಸಚಿವರು ಡಿಜಿಟಲ್ ಸಾಕ್ಷರತೆ ಬಗ್ಗೆ ಹೇಳಿದ್ದಿಷ್ಟು...

***"ನಮ್ಮ ಜನಸಂಖ್ಯೆಯ ಪ್ರಯೋಜನ ಪಡೆಯಲು ನಾವು ಗ್ರಾಮೀಣ ಭಾರತದ ಜನರಲ್ಲಿ ಡಿಜಿಟಲ್ ಸಾಕ್ಷರತೆಯನ್ನು ಹರಡಬೇಕಿದೆ. 16.8 ಕೋಟಿ ಗ್ರಾಮೀಣ ಕುಟುಂಬದಲ್ಲಿ ಸುಮಾರು 12 ಕೋಟಿಗೂ ಹೆಚ್ಚು ಕುಟುಂಬಗಳಲ್ಲಿ ಕಂಪ್ಯೂಟರ್ ಮತ್ತು ಡಿಜಿಟಲ್ ಸಾಕ್ಷರತೆ ಹೊಂದಿದ ಸದಸ್ಯರಿಲ್ಲ. ಹಾಗಾಗಿ ಡಿಜಿಟಲ್ ಸಾಕ್ಷರತೆ ಉತ್ತೇಜಿಸಲು ಸರ್ಕಾರ ಈಗಾಗಲೇ ನ್ಯಾಷನಲ್ ಡಿಜಿಟಲ್ ಲಿಟರಸಿ ಮಿಷನ್ ಮತ್ತು ಡಿಜಿಟಲ್ ಸಾಕ್ಷರತಾ ಅಭಿಯಾನ ಎಂಬ ಎರಡು ಕಾರ್ಯಕ್ರಮಗಳಿಗೆ ಒಪ್ಪಿಗೆ ನೀಡಿದೆ. ಈಗ ನಾವು ಹೊಸದಾಗಿ ಮುಂದಿನ ಮೂರುವರ್ಷದಲ್ಲಿ ಹೆಚ್ಚುವರಿಯಾಗಿ ಸುಮಾರು 6 ಕೋಟಿ ಕುಟುಂಬಗಳಿಗೆ ಡಿಜಿಟಲ್ ಸಾಕ್ಷರರನ್ನಾಗಿಸುವ ಉದ್ದೇಶವನ್ನು ನ್ಯಾಷನಲ್ ಡಿಜಿಟಲ್ ಲಿಟರಸಿ ಸ್ಕೀಂ ಹೊಂದಿದೆ."***

ಪ್ರಸ್ತುತ ಯೋಜನೆಯು ಮಾನ್ಯ ಹಣಕಾಸು ಮಂತ್ರಿಯವರು ಬಜೆಟ್'ನಲ್ಲಿ ಘೋಷಿಸಿದಂತೆ ಮುನ್ನಡೆಯಲಿದೆ. ಡಿಜಿಟಲ್ ಇಂಡಿಯಾ ಉಪಕ್ರಮಗಳ ಅಡಿಯಲ್ಲಿ ಸಮಾಜವನ್ನು ಸಬಲೀಕರಿಸಲು, ಸರ್ಕಾರದ ಧ್ಯೇಯೋದ್ದೇಶ ಸಾಧಿಸಲು ಡಿಜಿಟಲ್ ಸಾಕ್ಷರತೆ ಪ್ರಮುಖ ಕೀಲಿ ಕೈ ಆಗಿದೆ. ಡಿಜಿಟಲ್ ಸಾಕ್ಷರತೆಯ ಉಪೋತ್ಪನ್ನಗಳು ಪ್ರಮುಖವಾಗಿ ಸಾಮಾಜಿಕ-ಆರ್ಥಿಕ ವಿಚಾರಗಳನ್ನವಲಂಭಿಸಿವೆ. ಡಿಜಿಟಲ್ ಸಾಕ್ಷರತೆಯು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ ಜನರಿಗೆ ಸಹಕಾರಿಯಾಗಿದೆ. ಅದರಲ್ಲೂ ಆರೋಗ್ಯಕಾಳಜಿ, ಜೀವನೋಪಾಯ ನಡೆಸಲು ಮತ್ತು ಶಿಕ್ಷಣ ಪಡೆಯಲು ಸಹಯಕವಾಗಲಿದೆ.

ಇವೆಲ್ಲವುದರ ಜೊತೆಗೆ ಮೊಬೈಲ್ ಫೋನ್ ಮೂಲಕ ಕ್ಯಾಶ್'ಲೆಸ್ ವ್ಯವಹಾರವನ್ನು ಪ್ರೋತ್ಸಾಹಿಸುವ ಬಗ್ಗೆ ಸರ್ಕಾರ ನಂಬಿಕೆಯಿಟ್ಟಿದೆ. ಈ ತರಬೇತಿಯು ಎಲೆಕ್ಟ್ರಾನಿಕ್ಸ್ ಪಾವತಿ ಸಿಸ್ಟಂ ಮೂಲಕ ಡಿಜಿಟಲ್ ಹಣಕಾಸು ಉಪಕರಣಗಳನ್ನು ಬಳಸಲು ಒತ್ತು ನೀಡುವ ಉದ್ದೇಶ ಸರ್ಕಾರದ್ದು.

**ಯೋಜನೆಯ ವ್ಯಾಪ್ತಿ:**

ಈ ಯೋಜನೆಯು ದೇಶದ ಗ್ರಾಮೀಣ ಪ್ರದೇಶಕ್ಕೆ ಮಾತ್ರ ಅನ್ವಯವಾಗಲಿದೆ. ದೇಶದಾದ್ಯಂತ ಈ ಯೋಜನೆಯು ಪರಿಣಾಮಕಾರಿಯಾಗಿ ಜಾರಿಯಾಗಲು ರಾಜ್ಯ ಮತ್ತು ಕೇಂದ್ರಾಡಳಿತ ಗ್ರಾಮೀಣ ಕುಟುಂಬಗಳಿಗೆ ತಲುಪಲು ಪ್ರಮಾಣಾನುಪಾತದ ಗುರಿಯನ್ನು ನಿಗಧಿಪಡಿಸಲಾಗಿದೆ. ಪ್ರತಿ ರಾಜ್ಯ/ಕೇಂದ್ರಾಡಳಿತ ಪ್ರದೇಶವು ನಿರ್ದಿಷ್ಟ ಗುರಿ ಹೊಂದಿದ್ದರೂ ರಾಜ್ಯದಿಂದ ರಾಜ್ಯಕ್ಕೆ ಫಲಿತಾಂಶ ವಿಭಿನ್ನವಾಗಿರುತ್ತದೆ. ನಗರ ಪ್ರದೇಶದಲ್ಲಿನ ಪಂಚಾಯಿತಿ ಗುಂಪುಗಳನ್ನು ಈ ಯೋಜನೆಯಿಂದ ಹೊರಗಿಡಲಾಗಿದೆ. ಅಂತಹ ಪಂಚಾಯಿತಿಗಳನ್ನು ಕೈಗಾರಿಕೆಗಳು/ಸಂಘಸಂಸ್ಥೆಗಳು ಸಿಎಸ್'ಆರ್ ಚಟುವಟಿಕೆಗಳು ಒಳಗೊಂಡಿರುತ್ತದೆ.

ದೇಶಾದ್ಯಂತ ಇರುವ 2.50 ಲಕ್ಷ ಗ್ರಾಮ ಪಂಚಾಯಿತಿಯನ್ನು ಕೇಂದ್ರವಾಗಿಟ್ಟುಕೊಂಡು ಭೌಗೋಳಿಕವಾಗಿ ನ್ಯಾಯ ಸಮ್ಮತ ರೀತಿಯಲ್ಲಿ ಜನರನ್ನು ಒಳಗೊಳ್ಳಲಿದೆ. ಒಂದು ಗ್ರಾಮಪಂಚಾಯತ್'ನಲ್ಲಿ ಸರಾಸರಿ

200-300 ಮಂದಿ ಫಲಾನುಭವಿ ಯೋಜನೆಯ ಅಡಿಯಲ್ಲಿ ಬರಲಿದ್ದಾರೆ ಎಂದು ಅಂದಾಜಿಸಲಾಗಿದೆ. ವಾಸ್ತವಿಕವಾಗಿ ಒಂದು ಜಿಲ್ಲೆಯ ಇ-ಗವರ್ನೆನ್ಸ್ ಸೊಸೈಟಿಯ ಅಧ್ಯಕ್ಷರಾಗಿರುವ ಜಿಲ್ಲಾ ನ್ಯಾಯಾಧೀಶರು ಜಿಲ್ಲೆಯ ಜನಸಂಖ್ಯೆ, ಸ್ಥಳೀಯ ಅಗತ್ಯತೆ, ಜಿಲ್ಲೆಯ ವ್ಯಾಪ್ತಿಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಒಂದು ಗ್ರಾಮ ಪಂಚಾಯಿತಿಯಲ್ಲಿ ಇಂತಿಷ್ಟು ಫಲಾನುಭವಿಗಳಾಗಬೇಕು ಎಂದು ತೀರ್ಮಾನಿಸುತ್ತಾರೆ. ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆಯಡಿ ಬರುವ ಹಳ್ಳಿಗಳೂ ಡಿಜಿಟಲ್ ಸಾಕ್ಷರತೆ ಯೋಜನೆಯ ವ್ಯಾಪ್ತಿಗೆ ಬರಲಿದೆ.

**9.0 ಯೋಜನೆ ಅನುಷ್ಠಾನದ ವಿಶಾಲ ಚೌಕಟ್ಟು:**

ಯೋಜನೆಗೆ ಸೂಕ್ತ ಬೆಂಬಲ ಮತ್ತು ಮೇಲ್ವಿಚಾರಣೆಯನ್ನು ಕೇಂದ್ರ ಮಟ್ಟದಲ್ಲಿ ನೋಡಿಕೊಳ್ಳಲಾಗುತ್ತದೆ. ಸಿಎಸ್‌ಸಿ-ಎಸ್‌ಪಿವಿಯು ಸಂಘಸಂಸ್ಥೆಗಳ ಸಹಯೋಗದೊಂದಿಗೆ ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ ನಿಧಾನವಾಗಿ ಅನುಷ್ಠಾನ ಮಾಡಲಿದೆ. PMGDISHA ಯೋಜನೆ ಅಂತಿಮ ಹಂತದವರೆಗೂ ಇ-ಗವರ್ನೆನ್ಸ್ ಸೊಸೈಟಿಯ ಮುಖ್ಯಸ್ಥರಾಗಿರುವ ಜಿಲ್ಲಾ ನ್ಯಾಯಾಧೀಶರು/ ಜಿಲ್ಲಾಧಿಕಾರಿಯು ಪ್ರಮುಖ ಪಾತ್ರವಹಿಸುತ್ತಾರೆ. ಬೇರು ಮಟ್ಟದಲ್ಲಿ ಈ ಯೋಜನೆ ಸಾಕಾರಗೊಳಿಸಲು CSC-SPV ನಿಂದ ತರಬೇತಿ ಪಡೆದವರು ಯೋಜನೆ ಅನುಷ್ಠಾನದಲ್ಲಿ ಪಾಲ್ಗೊಳ್ಳುತ್ತಾರೆ.

9.1 NDLM/DISHA ಯೋಜನೆಯು ಸಂಯೋಜಿತ ತರಬೇತಿ ಪಾಲುದಾರರ/ ತರಬೇತಿ ಕೇಂದ್ರಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತದೆ. ದೇಶಾದ್ಯಂತ ಸುಮಾರು 2,500 ತರಬೇತಿ ಪಾಲುದಾರರು / ಕೇಂದ್ರಗಳಿದ್ದು, ಅವುಗಳನ್ನು 2.5 ಲಕ್ಷ ತರಬೇತಿ ಕೇಂದ್ರಗಳಿಗೆ ಹೆಚ್ಚಿಸುವ ಪ್ರಯತ್ನ ಮಾಡಲಾಗುವುದು. ಸಿಎಸ್ ಸಿ-ಪಿಎಸ್ ವಿ ನಿಯಮಗಳ ಪ್ರಕಾರ ಡಿಜಿಟಲ್ ಸಾಕ್ಷರತೆಯ ನೇರ ತರಬೇತಿಯನ್ನು ಕೈಗೊಳ್ಳಲಾಗುವುದು. ಇವುಗಳಲ್ಲಿ ಸಿಎಸ್ ಸಿ, ಎನ್ ಐ ಇ ಎಲ್ ಐ ಟಿ ಕೇಂದ್ರಗಳು/ ಮಾನ್ಯತೆ ಪಡೆದ ಕೇಂದ್ರಗಳ, ವಯಸ್ಕರ ಸಾಕ್ಷತಾ ಕೇಂದ್ರಗಳು, ಶಾಲೆಗಳಲ್ಲಿ ತರಬೇತಿ ಜರುಗುವುದು. ಎಂ ಎಚ್ ಆರ್ ಡಿ, ಇಗ್ನೊ ಕೇಂದ್ರಗಳಲ್ಲಿ, ಮಾಹಿತಿ ತಂತ್ರಜ್ಞಾನ ಸಾಕ್ಷರತೆಯಲ್ಲಿ ಭಾಗಿಯಾಗಿರುವ ಎನ್ ಜಿ ಒಗಳು, ಗ್ರಾಮ ಸ್ವ ಉದ್ಯೋಗ ತರಬೇತಿ ಸಂಸ್ಥೆಗಳು, ಕೈಗಾರಿಕಾ ಪಾಲುದಾರರು, ಕಾರ್ಪೋರೇಟ್ ಗಳ ಸಾಮಾಜಿಕ ಹೊಣೆಗಾರಿಕೆ ಆದ್ಯತೆಯ ಕಂಪನಿಗಳು ಇದರಲ್ಲಿ ಸೇರಿವೆ.

9.2 ತರಬೇತಿ ಪಾಲುದಾರರು/ ತರಬೇತಿ ಕೇಂದ್ರಗಳಿಗೆ ಒಂದು ನಿರ್ದಿಷ್ಟ ರಾಜ್ಯದ ನಿರ್ದಿಷ್ಟ ಪ್ರದೇಶದಲ್ಲಿ ಕಾರ್ಯಚಟುವಟಿಕೆ ನಡೆಸಲು ಗುರಿಯನ್ನು ನೀಡಲಾಗುತ್ತದೆ. ತರಬೇತಿ ಪಾಲುದಾರರಿಗೆ/ ತರಬೇತಿ ಕೇಂದ್ರಗಳಿಗೆ CSC-SPV ನಿರ್ದೇಶಿಸಿದ ಗುರಿ ತಲುಪಲು ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾಗುತ್ತದೆ.

**9.3 ತರಬೇತಿ ಪಾಲುದಾರರು:**

ಯೋಜನೆಯನ್ನು ಸಾಕಾರಗೊಳಿಸಲು ಡಿಜಿಟಲ್ ಸಾಕ್ಷರರನ್ನಾಗಿಸಲು ಸರ್ಕಾರೇತರ ಸಂಘಸಂಸ್ಥೆಗಳು, ಸಂಸ್ಥೆಗಳನ್ನು ಬಳಸಿಕೊಳ್ಳಲಾಗುತ್ತದೆ. ಆ ಮೂಲಕ CSC-SPV ಉದ್ದೇಶವನ್ನು ಈಡೇರಿಸಿಕೊಳ್ಳುವಂತೆ ಮಾಡಲು ಸಹಕಾರಿಯಾಗಿದೆ.

* ತರಬೇತಿ ಪಾಲುದಾರನಾದವನು ಭಾರತೀಯ ಸಂಸ್ಥೆಯಲ್ಲಿ ನೋಂದಣಿಯಾಗಿರಬೇಕು. ಹಾಗೆಯೇ ಶಿಕ್ಷಣ/ಮಾಹಿತಿ ತಂತ್ರಜ್ಞಾನ ವಿಷಯದಲ್ಲಿ ಕನಿಷ್ಟ ಮೂರು ವರ್ಷ ಅನುಭವ ಹೊಂದಿರಬೇಕು. ಇದರ ಜೊತೆಗೆ ಆದಾಯ ತೆರಿಗೆ, ಪ್ಯಾನ್ ನಂಬರ್ ಮತ್ತು ಕಳೆದ ಮೂರು ವರ್ಷದ ಲೆಕ್ಕಪತ್ರ ವರದಿಯನ್ನು ನೀಡಬೇಕು.

* ಸಂಘ-ಸಂಸ್ಥೆಗಳು ಭಾರತದ ಯಾವುದಾದರು ಕಾಯ್ದೆ/ಕಾನೂನಿನಡಿಯಲ್ಲಿ ಸ್ಥಾಪಿತವಾಗಿರಬೇಕು. ಇಲ್ಲವೇ ಸಮಾಜದ ಹೆಸರಿನಲ್ಲಾದರೂ ಸ್ಥಾಪಿತವಾಗಿರಬೇಕು.

* ತರಬೇತಿ ಪಾಲುದಾರರಾಗುವವರಿಗೆ ಶಿಕ್ಷಣ/ ಮಾಹಿತಿ ತಂತ್ರಜ್ಞಾನದ ಸಾಕ್ಷರತಾ ತರಬೇತಿಯ ಬಗ್ಗೆ ಸ್ಪಷ್ಟತೆಯಿರಬೇಕು. ಹಾಗೆಯೇ ಡಿಜಿಟಲ್ ಸಾಕ್ಷರತೆಯ ಧ್ಯೇಯೋದ್ದೇಶಗಳ ಬಗ್ಗೆ, ದಾಖಲೆ ನಿರ್ವಹಣೆ ಬಗ್ಗೆ ಮಾಹಿತಿಯಿರಬೇಕು.

9.3.1 ತರಬೇತಿ ಪಾಲುದಾರನ ಪಾತ್ರ

* ತರಬೇತಿ ಪಾಲುದಾರರನು ತನಗೆ ವಹಿಸಿದ ಜಿಲ್ಲೆ/ವಿಭಾಗ/ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಅಭ್ಯರ್ಥಿ ಡಿಜಿಟಲ್ ಸಾಕ್ಷರರನ್ನಾಗಿಸುವ ಸಂಪೂರ್ಣ ಜವಬ್ದಾರಿಯನ್ನು ಆತ/ ತರಭೇತಿ ಕೇಂದ್ರ ಹೊಂದಿರುತ್ತದೆ.

* ತರಬೇತಿ ಕೇಂದ್ರದಲ್ಲಿ ಯೋಜನೆಗೆ ಅಗತ್ಯವಾದ ತರಬೇತಿ ನೀಡಲು ತರಬೇತಿ ಪಾಲುದಾರ ಬದ್ಧವಾಗಿರಬೇಕು.

* ಯೋಜನೆಯ ಒಟ್ಟಾರೆ ನಿಯಮಗಳ, ನಿರ್ವಹಣೆಯ ಬಗ್ಗೆ ತರಬೇತಿ ಪಾಲುದಾರ ಜವಬ್ದಾರನಾಗಿರುತ್ತಾನೆ.

* ತರಬೇತಿ ಪಾಲುದಾರ ಸರಿಯಾಗಿ ಮತ್ತು ಸಕಾಲದಲ್ಲಿ ಕೇಂದ್ರಕ್ಕೆ ವರದಿ ಸಲ್ಲಿಸಬೇಕಾಗುತ್ತದೆ.

* ಸಿಎಸ್ ಸಿ- ಪಿಎಸ್ ವಿ ಪ್ರಕಟಿಸಿರುವ ಗುಣಮಟ್ಟದ ಕಾರ್ಯಾಚರಣೆಯ ನಿಯಮ(ಎಸ್ ಒಪಿ) ಆಧರಿಸಿದಂತೆಯೇ ತರಬೇತಿ ಪಾಲುದಾರರ ನಿಯಮಗಳಿರುತ್ತವೆ.

**9.4 ತರಬೇತಿ ಕೇಂದ್ರಗಳು**

ತರಬೇತಿ ಪಾಲುದಾರರು ಗ್ರಾಮಪಂಚಾಯತ್ ಮಟ್ಟದಲ್ಲಿ ಸೂಕ್ತ ಮೂಲಭೂತ ಸೌಕರ್ಯ ಹಾಗೂ ಅಗತ್ಯ ಮಾನವ ಸಂಪನ್ಮೂಲಗಳನ್ನೊಳಗೊಂಡ ಕೇಂದ್ರವನ್ನು ತೆರೆಯಬೇಕಾಗುತ್ತದೆ.

ತರಬೇತಿ ಕೇಂದ್ರದ ಪ್ರಮುಖ ಮಾನದಂಡಗಳೆಂದರೆ

* ತರಬೇತಿ ಸಂಸ್ಥೆಯು ಭಾರತೀಯ ಸಂಸ್ಥೆಯೆಂದು ದೃಢೀಕರಿಸಲ್ಪಟ್ಟಿರಬೇಕು. ಮಾಹಿತಿ ತಂತ್ರಜ್ಞಾನ ಸಾಕ್ಷರತೆ ಶಿಕ್ಷಣ ನೀಡುವ ಬಗ್ಗೆ, ತರಬೇತಿ ನೀಡುವುದನ್ನು ಸಾಬೀತು ಪಡಿಸಬೇಕು. ಸೂಕ್ತ ಸವಲತ್ತುಗಳಿರುವುದನ್ನು ರುಜುವಾತುಪಡಿಸಬೇಕು.

* ತರಬೇತಿ ಪಾಲುದಾರ ಎಲ್ಲಾ ದಾಖಲೆಗಳನ್ನು ಪೂರ್ಣಗೊಳಿಸಿದ ಬಳಿಕ CSC-SPV ನೇತೃತ್ವದ ಸಮಿತಿ ತರಬೇತಿ ಕೇಂದ್ರಕ್ಕೆ ಭೇಟಿ ನೀಡಿ ತೃಪ್ತಿಕರವಾಗಿದೆ ಎಂದು ವರದಿ ನೀಡಿದ ಬಳಿಕ ತರಬೇತಿ ಸಂಸ್ಥೆಗೆ ಮಾನ್ಯತೆ ದೊರೆಯುತ್ತದೆ.

* ಸಿಎಸ್ ಸಿ- ಪಿಎಸ್ ವಿ ಪ್ರಕಟಿಸಿರುವ ಗುಣಮಟ್ಟದ ಕಾರ್ಯಾಚರಣೆಯ ನಿಯಮ(ಎಸ್ ಒಪಿ) ಆಧರಿಸಿದಂತೆಯೇ ತರಬೇತಿ ಪಾಲುದಾರರ ನಿಯಮಗಳಿರುತ್ತವೆ.

**9.4.1 ತರಬೇತಿ ಸಂಸ್ಥೆಯ ಪಾತ್ರ:**

* ಕೋರ್ಸಿಗೆ ಅಭ್ಯರ್ಥಿಗಳನ್ನು ದಾಖಲು ಮಾಡಿಕೊಳ್ಳುವುದು.

* ಅರ್ಥವಾಗುವಂತೆ ಅಭ್ಯರ್ಥಿಗೆ ಸೂಕ್ತ ತರಬೇತಿಯನ್ನು ನೀಡುವುದು.

* ಆನ್ ಲೈನ್ ಹಾಜರಾತಿ ವ್ಯವಸ್ಥೆ ಮತ್ತು ಕಲಿಕಾ ನಿರ್ವಹಣಾ ಪದ್ಧತಿಯ ನಿರಂತರ ಪರಿಶೀಲನೆಯನ್ನು ಆಧರಿಸಿದ ಹಾಜರಾತಿ.

* ಕೋರ್ಸಿಗೆ ಸೇರ್ಪಡೆಯಾದ ಎಲ್ಲಾ ಅಭ್ಯರ್ಥಿಗಳ ದಾಖಲೆಯಿಡುವುದು. ತರಗತಿಗಳಿಗೆ ಹಾಜರಾದ ಬಗ್ಗೆ ಸೂಕ್ತ ದಾಖಲೆಯಿಡುವುದು, ಆನ್'ಲೈನ್ ಪರೀಕ್ಷೆಗೆ ಹಾಜರಾದ ಬಗ್ಗೆ ಖಚಿತ ಪಡಿಸುವುದು.

* ತರಬೇತಿ ಮುಗಿದು ನಂತರ ಎರಡು ವರ್ಷಗಳ ಕಾಲ ಅಭ್ಯರ್ಥಿಗಳಿಗೆ ತರಬೇತಿ ಕೇಂದ್ರವು ಸೂಕ್ತ ಸಹಕಾರ ಮತ್ತು ಮಾರ್ಗದರ್ಶನ ನೀಡುವುದು.

ಅಭ್ಯರ್ಥಿಯ ಕಲಿಕಾ ಸಾಧನೆಯ ಫಲಿತಾಂಶವನ್ನು ಖಚಿತಪಡಿಸುವುದು.

9.5 ಮೊಬೈಲ್ ಫೋನ್'ಗಳಿಗೆ ಮಾಹಿತಿ ತಲುಪಿಸುವುದು ಹೆಚ್ಚುವರಿ ಸೇವೆಯಾಗಿದ್ದು, ನವ ಮಾಹಿತಿ ತಂತ್ರಜ್ಞಾನ ಸಾಕ್ಷರರು, ನೇರ ತರಬೇತಿ ಮಾಧ್ಯಮದ ಮೂಲಕ ಕಲಿಯಬಹುದಾಗಿದೆ.

9.6 ಆಧಾರ್ ಸಂಖ್ಯೆಯನ್ನು ಬಳಸಿ ಪ್ರತಿಯೊಬ್ಬ ಫಲಾನುಭವಿಯನ್ನು ಗುರುತಿಸಬಹುದು ಮತ್ತು ನಕಲು ಆಗುವುದನ್ನು ತಪ್ಪಿಸಬಹುದು.

9.7 ಪಾರದರ್ಶಕತೆಯನ್ನು ಕಾಪಾಡುವುದಕ್ಕಾಗಿ ತರಬೇತಿ ನೀಡುವ ಪಾಲುದಾರರು/ ಕೇಂದ್ರಗಳ ತರಬೇತಿ ಕಾರ್ಯಕ್ರಮಗಳನ್ನು ವರದಿ ಮಾಡುವುದಕ್ಕೆ/ ನಿಗಾ ಇಡುವುದಕ್ಕೆ ಸಿಎಸ್ ಸಿ- ಪಿಎಸ್ ವಿ ಮೂಲಕ ಆನ್'ಲೈನ್ ವರದಿಗಾರಿಕೆಯ ಸೂಕ್ತ ರೀತಿಯ ವ್ಯವಸ್ಥೆಯನ್ನು ಮಾಡಲಾಗುವುದು.

9.8 ನಿಗದಿತ ನಿಯಮಗಳಂತೆ ತರಬೇತಿ ಪಾಲುದಾರರು/ ಕೇಂದ್ರಗಳು ಫಲಾನುಭವಿಗಳು ತರಬೇತಿಯನ್ನು ಪಡೆಯಲು ಮುಂದಾಗುವಂತೆ ಮತ್ತು ಯಶಸ್ವಿಯಾಗಿ ತರಬೇತಿಯನ್ನು ಪಡೆದುಕೊಳ್ಳುವಂತೆ ಪ್ರೋತ್ಸಾಹಿಸುವುದು.

9.9 ಯಶಸ್ವಿಯಾಗಿ ತರಬೇತಿ ಪಡೆದ ಬಳಿಕ, ತರಬೇತಿ ಪಾಲುದಾರರು/ ಕೇಂದ್ರಗಳು ನಿಯಮಿತವಾಗಿ ವರದಿ ಮಾಡಬೇಕು ಮತ್ತು ಸಿಎಸ್‌ಸಿ-ಪಿಎಸ್‌ವಿಗಾಗಿ ತರಬೇತಿ ಪಡೆದ ವ್ಯಕ್ತಿಯ ಮಾಹಿತಿಯನ್ನು ನೀಡಬೇಕು.

9.10 ತರಬೇತಿ ಪಡೆದ ಅಭ್ಯರ್ಥಿಗಳು (ತರಬೇತಿ ಪೂರ್ಣಗೊಳ್ಳುತ್ತಿದ್ದಂತೆಯೇ) ಮಾನ್ಯತೆ ಪಡೆದ ಸಂಸ್ಥೆಯು ನಡೆಸುವ ಆಲ್‌ಲೈನ್ ಪರೀಕ್ಷೆ ಬರೆಯಬೇಕಾಗುತ್ತದೆ. ತರಬೇತಿ ಸಂಸ್ಥೆಗಳಿಗೆ ತಗುಲುವ ತರಬೇತಿ ವೆಚ್ಚವನ್ನು ಅಭ್ಯರ್ಥಿಗಳಿಗೆ ಯಶಸ್ವಿಯಾಗಿ ಪ್ರಮಾಣಪತ್ರ ವಿತರಿಸಿದ ಬಳಿಕ ಸಿಎಸ್‌ಸಿ-ಪಿಎಸ್‌ವಿಯಿಂದ ಬಿಡುಗಡೆ ಮಾಡಲಾಗುತ್ತದೆ.

9.11 ತರಬೇತಿ ಪಡೆದ ಫಲಾನುಭವಿಗಳಿಗೆ ರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಪಡೆದ ಪ್ರಮಾಣೀಕೃತ ಸಂಸ್ಥೆಗಳಾದ ನ್ಯಾಷನಲ್ ಇನ್ ಸ್ಟಿಟ್ಯೂಟ್ ಆಫ್ ಎಲೆಕ್ಟ್ರಾನಿಕ್ಸ್ ಅಂಡ್ ಇನ್ ಫಾರ್ಮೇಷನ್ ಟೆಕ್ನಾಲಜಿ (ಎನ್ ಐ ಇ ಎಲ್ ಐಟಿ), ನ್ಯಾಷನಲ್ ಇನ್ ಸ್ಟಿಟ್ಯೂಟ್ ಆಫ್ ಓಪನ್ ಸ್ಕೂಲಿಂಗ್ (ಎನ್ ಐ ಒ ಎಸ್), ಐಸಿಟಿ ಅಕಾಡೆಮಿ ಆಫ್ ತಮಿಳ್ ನಾಡು (ಐಸಿಟಿಎಸಿಟಿ), ಹರ್ಯಾಣ ನಾಲೆಡ್ಜ್ ಕಾರ್ಪೋರೇಷನ್ ಲಿಮಿಟೆಡಟ್ (ಹೆಚ್ ಕೆ ಸಿಎಲ್), ನ್ಯಾಷನಲ್ ಇನ್ ಸ್ಟಿಟ್ಯೂಟ್ ಆಫ್ ಎಂಟರ್ ಪ್ರೇನರ್‌ಷಿಪ್ ಅಂಡ್ ಸ್ಮಾಲ್ ಬ್ಯುಸಿನೆಸ್ ಡೆವೆಲಪ್ ಮೆಂಟ್ (ಎನ್ ಐಇಎಸ್ ಬಿಯುಡಿ)ಯಂಥ ಸಂಸ್ಥೆಗಳು ಪರೀಕ್ಷೆ ನಡೆಸಿ, ಪ್ರಮಾಣ ಪತ್ರ ನೀಡುತ್ತವೆ. ಸೂಚಿತ ನಿಯಮದಂತೆ ಇನ್ನಷ್ಟು ಸಂಸ್ಥೆಗಳನ್ನು ಆನ್ ಲೈನ್ ಮೌಲ್ಯಾಂಕನಕ್ಕೆ ನಿಯೋಜಿಸಲಾಗುವುದು. ಪ್ರತಿ ರಾಜ್ಯದಲ್ಲಿ ಒಂದು ಸಂಸ್ಥೆ ಪ್ರಮಾಣಪತ್ರ ವಿತರಣೆಯ ಕೆಲಸವನ್ನು ಸಲೀಸಲಾಗಿ ನಡೆಯುವಂತೆ ನೋಡಿಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನ ನಡೆದಿದೆ.

**9.12 ಕೈಗಾರಿಕೆಗಳು, ಎನ್ ಜಿ ಒ ಮತ್ತು ಇತರೆ ಸಂಸ್ಥೆಗಳು ನಡೆಸಿದ ಮಾಹಿತಿ ತಂತ್ರಜ್ಞಾನ ಸಾಕ್ಷರತೆ ಹರಡುವ ಪ್ರಯತ್ನಗಳ ಸಮನ್ವಯ**

ದೇಶದಲ್ಲಿ ಡಿಜಿಟಲ್ ಸಾಕ್ಷರತೆಯನ್ನು ಹರಡುವ ನಿಟ್ಟಿನಲ್ಲಿ ಕೈಗಾರಿಕೆಗಳು, ಎನ್ ಜಿ ಒಗಳು ಮತ್ತು ಇತರೆ ಸಂಸ್ಥಗಳು ನಡೆಸಿರುವ ಪ್ರಯತ್ನವನ್ನು ಸಮನ್ವಯಗೊಳಿಸಿ, ಈ ಯೋಜನೆಯಡಿ ಅಗತ್ಯ ಸಮನ್ವಯ ಸಾಧಿಸುವುದಕ್ಕೆ ಸಿಎಸ್‌ಸಿ-ಪಿಎಸ್‌ವಿ ಪ್ರಯತ್ನಿಸಲಿದೆ. ಈ ವಿಷಯದಲ್ಲಿ ವಿವಿಧ ಪಾಲುದಾರರ ನಡುವೆ ಸಮನ್ವಯ ಸಾಧಿಸುವುದಕ್ಕೆ ಸಿಎಸ್‌ಸಿ-ಪಿಎಸ್‌ವಿ ಪ್ರಯತ್ನಿಸುತ್ತದೆ. ಕೈಗಾರಿಕೆ, ಎನ್ ಜಿ ಒ ಇತ್ಯಾದಿಗಳ

ಮೂಲಕ ತರಬೇತಿ ಪಡೆದ ಅಭ್ಯರ್ಥಿಗಳಿಗೂ ಮಾನ್ಯತೆ ಪಡೆದ ಸಂಸ್ಥೆಗಳ ಮೂಲಕ ಡಿಜಿಟಲ್ ಸಾಕ್ಷರತೆಯ ಪ್ರಮಾಣ ಪತ್ರವನ್ನು ವಿತರಿಸುವುದಕ್ಕೆ ಪರಿಗಣಿಸಲಾಗುವುದು. ಅಂಥ ಅಭ್ಯರ್ಥಿಗಳ ತರಬೇತಿಯ ಪಾಲನ್ನು ಸಂಸ್ಥೆಗಳು ತಾವೇ ಹೊರಬೇಕಾಗುತ್ತದೆ/ ಕಾರ್ಪೋರೇಟ್ ಸೋಷಿಯಲ್ ರೆಸ್ಪಾನ್ಸಿಬಲಿಟಿ ಫಂಡ್ ಮೂಲಕ ನಿರ್ವಹಿಸಬೇಕಾಗುತ್ತದೆ. ಈ ರೀತಿಯಾಗಿ ತರಬೇತಿ ಪಡೆದ ಅಭ್ಯರ್ಥಿಗಳೂ ಮಾನ್ಯತೆ ಪಡೆದ ಸಂಸ್ಥೆಗಳು ನಡೆಸುವ ಪರೀಕ್ಷೆಗೆ ಹಾಜರಾಗುವ ಅರ್ಹತೆಯನ್ನು ಪಡೆದಿರುತ್ತಾರೆ ಮತ್ತು ಇವರ ಪ್ರಮಾಣೀಕರಣದ ಶುಲ್ಕವನ್ನು ಸಂಬಂಧಪಟ್ಟ ಸಂಸ್ಥೆಗಳೇ ಭರಿಸಬೇಕಾಗುತ್ತದೆ.

9.13 ವಿವಿಧ ಸಂಸ್ಥೆಗಳ ಪಾತ್ರ ಮತ್ತು ಹೊಣೆಗಾರಿಕೆಗಳು

9.13.1 ಎಂಇಐಟಿವೈ:

i. ಯೋಜನೆಗೆ ಸಂಬಂಧಿಸಿದಂತೆ ಯಾವುದೇ ರೀತಿಯ ತೀರ್ಮಾನಗಳನ್ನು ಕೈಗೊಳ್ಳುವ ಹಿನ್ನೆಲೆಯಲ್ಲಿ ಎಂಇಐಟಿವೈಯ ಕಾರ್ಯದರ್ಶಿಗಳ ಅಧ್ಯಕ್ಷತೆಯ ಸಮಿತಿಯೊಂದು ರಚನೆ ಮಾಡಲಾಗುತ್ತದೆ.
ii. ಯೋಜನೆಯ ಪರಾಮರ್ಶೆ ಮತ್ತು ಮುನ್ನಡೆಸುವ ಗುಂಪು ಎಂಇಐಟಿವೈಯ ಜಂಟಿ ಕಾರ್ಯದರ್ಶಿ( ಎಚ್ ಆರ್) ಅವರ ರಚಿಸಲಾಗುವುದು. ಇದು ಯೋಜನೆ ನಿಗದಿತ ಸಮಯಕ್ಕೆ ಜಾರಿಯಾಗುವುದನ್ನು ಖಚಿತಪಡಿಸಿಕೊಳ್ಳುತ್ತದೆ ಮತ್ತು ಅಗತ್ಯ ನಿಧಿ ಬಿಡುಗಡೆಗೆ ಶಿಫಾರಸು ಮಾಡುತ್ತದೆ.
iii. ಯೋಜನೆಯ ಪರಾಮರ್ಶೆ ಮತ್ತು ಮುನ್ನಡೆಸುವ ಗುಂಪಿನ ಶಿಫಾರಸು/ ಎಂಇಐಟಿವೈ ಮೌಲ್ಯಾಂಕನ/ ಎಂಇಐಟಿವೈ ಅನುಮತಿ ಆಧಾರದ ಮೇಲೆ ಯೋಜನೆ ಜಾರಿಗೊಳಿಸುವ ಸಂಸ್ಥೆಗೆ ಅಗತ್ಯ ಆರ್ಥಿಕ ನಿಧಿ ಪೂರೈಸುತ್ತದೆ
iv. ಯೋಜನೆಯ ಪ್ರಗತಿಗೆ ಸಂಬಂಧಿಸಿದಂತೆ ಅಗತ್ಯ ಮಾರ್ಗದರ್ಶನ ನೀಡುವುದು, ಸರ್ಕಾರಿ ಇಲಾಖೆಗಳು/ಸಂಘಟನೆಗಳು/ ಸಂಸ್ಥೆಗಳು ಮತ್ತು ಇತರೆ ಸಂಬಂಧಿಸಿದ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸುವುದು.
v. ಯೋಜನೆಗೆ ಸಂಬಂಧಿಸಿದ ಯಾವುದೇ ಇತರ ವಿಷಯ ಮತ್ತು ಅಂಶಗಳನ್ನು ಕೈಗೆತ್ತಿಕೊಳ್ಳಿ.

**9.13.2 ಕಾರ್ಯಕ್ರಮ ನಿರ್ವಹಣಾ ಘಟಕ**

ಸಿಎಸ್‌ಸಿ ಇ-ಆಡಳಿತ ಸೇವೆಗಳ ಭಾರತ ನಿಗಮದಡಿ ಕಾರ್ಯಕ್ರಮ ನಿರ್ವಹಣಾ ಘಟಕವನ್ನು ರಚಿಸಲಾಗುತ್ತದೆ. ಇದು ಪಿಎಂಜಿಡಿಐಎಸ್‌ಎಚ್ ಯೋಜನೆ ಜಾರಿಗೆ ಶ್ರಮಿಸುತ್ತದೆ. ಕಾರ್ಯಕ್ರಮ ನಿರ್ವಹಣಾ ಘಟಕವು ಮಾಹಿತಿ ತಂತ್ರಜ್ಞಾನ ಸಚಿವಾಲಯಕ್ಕೆ ಯೋಜನೆ ಜಾರಿಗೆ ಅಗತ್ಯವಿರುವ ನೆರವನ್ನು

ಒದಗಿಸುತ್ತದೆ, ನಿರ್ವಹಣೆ ಮತ್ತು ಮೇಲ್ವಿಚಾರಣೆಯನ್ನೂ ನೋಡಿಕೊಳ್ಳುತ್ತದೆ. ಸಿಎಸ್‌ಸ-ಎಸ್‌ಪಿವಿಯ ಕಾರ್ಯಕ್ರಮ ನಿರ್ವಹಣಾ ಘಟಕವೂ ಈ ಕೆಳಗಿನ ಚಟುವಟಿಕೆಗಳನ್ನು ಕೈಗೊಳ್ಳುತ್ತದೆ:

i. ಒಟ್ಟಾರೆ ಯೋಜನೆಯ ಸಮನ್ವಯ, ಜಾರಿ ಮತ್ತು ನಿರ್ವಹಣೆಯನ್ನು ನೋಡಿಕೊಳ್ಳುತ್ತದೆ.
ii. ಪಿಎಂಜಿಡಿಐಎಸ್‌ಎಚ್‌ಎಯಲ್ಲಿ ಕೈಗಾರಿಕೆ, ಎನ್‌ಜಿಒ ಸೇರಿದಂತೆ ಇನ್ನು ಹಲವು ಪಾಲುದಾರರನ್ನು ಒಳಗೊಳ್ಳುವುದು.
iii. ಪಾಲುದಾರರು/ತಜ್ಞರ ಸಲಹೆಗಳೊಂದಿಗೆ ಬಹುಭಾಷೆಗಳಲ್ಲಿ ನಿರ್ದಿಷ್ಟ ಪಠ್ಯಕ್ರಮ/ಅಧ್ಯಯನ ಸಾಮಗ್ರಿಯನ್ನು ಸಿದ್ಧಪಡಿಸುವುದು
iv. ಪ್ರಮಾಣೀಕರಿಸುವ ಸಂಸ್ಥೆಗಳಾದ ಎನ್‌ಐಇಎಲ್‌ಐಟಿ, ಇಗ್ನೊ, ಎನ್‌ಐಒಎಸ್ ನಂತರ ಸಂಸ್ಥೆಗಳ ಸಲಹೆಗಳೊಂದಿಗೆ ತರಬೇತಿ ಸಂಸ್ಥೆಗಳಿಗೆ ಮಾನ್ಯತೆ ಪಡೆಯುವುದಕ್ಕೆ ತರಬೇತಿ ಮೂಲಸೌಕರ್ಯಗಳು, ಪ್ರಯೋಗಾಲಯ, ಸಿಬ್ಬಂದಿ/ತರಬೇತುದಾರರು ಇತ್ಯಾದಿಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಸಿದ್ಧಪಡಿಸಿ. ಹಾಗೆಯೇ ತರಬೇತಿ ಕೇಂದ್ರಗಳ ತರಬೇತಿ ಗುಣಮಟ್ಟ, ಮೂಲಸೌಕರ್ಯ, ಸಿಬ್ಬಂದಿ ಕುರಿತು ನಿಯಮಿತ ಪರಿಶೀಲನೆಗೂ ನಿಯಮಗಳನ್ನು ಸಿದ್ಧಪಡಿಸಿ.
v. ಫಲಾನುಭವಿಗಳ ಆಯ್ಕೆ, ಅಭ್ಯರ್ಥಿಗಳ ನೊಂದಾವಣೆ, ಮತ್ತು ತರಬೇತಿಯ ಮೇಲ್ವಿಚಾರಣೆಗೆ ನಿಯಮಗಳನ್ನು ರೂಪಿಸಿ.
vi. ಪ್ರಮಾಣೀಕರಿಸುವ ಸಂಸ್ಥೆಗಳೊಂದಿಗೆ ಚರ್ಚಿಸಿ ಪರೀಕ್ಷೆ ಹಾಗೂ ಪ್ರಮಾಣ ವಿತರಣೆಗೆ ನಿಯಮಗಳನ್ನು ರೂಪಿಸಿ.
vii. ಮೊಬೈಲ್ ಫೋನ್‌ಗಳ ಮೂಲಕ ಇ ಸಾಮಗ್ರಿಗಳನ್ನು ತಲುಪಿಸಿ
viii. ಯೋಜನೆಯ ಕುರಿತು ಜಾಗೃತಿ ಮೂಡಿಸಲು ಯೋಜನೆಯ ಪಾಲುದಾರರಿಗೆ ಕಾರ್ಯಾಗಾರ/ವಿಚಾರ ಸಂಕಿರಣಗಳನ್ನು ನಡೆಸಿ
ix. ಆಧಾರ ಗುರುತಿನ ವ್ಯವಸ್ಥೆ ಆಧಾರಿಸಿ ಸೂಕ್ತ ರೀತಿಯ ಮೇಲ್ವಿಚಾರಣಾ ವ್ಯವಸ್ಥೆಯನ್ನು ರಚಿಸಿ, ನಕಲಿ ಖಾತೆಗಳನ್ನು ಸೃಷ್ಟಿಯಾಗುವುದನ್ನು ತಪ್ಪಿಸಿ ಮತ್ತು ಸಮರ್ಪಕ ಮೇಲ್ವಿಚಾರಣೆಯನ್ನು ಖಚಿತಪಡಿಸಿಕೊಳ್ಳಿ
x. ಯೋಜನೆಯ ಮೇಲ್ವಿಚಾರಣೆಗೆ ಅನುಕೂಲಕವಾಗುವಂತೆ ನಿಯಮಿತವಾಗಿ ಮಾಹಿತಿ ತಂತ್ರಜ್ಞಾನ ಸಚಿವಾಲಯಕ್ಕೆ ಮತ್ತು ರಾಜ್ಯ ಸರ್ಕಾರ/ಜಿಲ್ಲಾಡಳಿತಕ್ಕೆ ಮಾಹಿತಿ ಒದಗಿಸಿ
xi. ಅಗತ್ಯಗಳನ್ನು ನಿಗದಿತ ಸಮಯದಲ್ಲಿ ಮತ್ತು ಬಜೆಟ್ ನಲ್ಲಿ ಪೂರೈಕೆಯಾಗುವುದನ್ನು ಖಚಿತಪಡಿಸಿಕೊಳ್ಳಿ. ಯಾವುದೇ ರೀತಿಯ ಬದಲಾವಣೆಗಳು ಅಗತ್ಯವಿದ್ದಲ್ಲಿ ಸಚಿವಾಲಯದಿಂದ ಅನುಮತಿ ಪಡೆದುಕೊಳ್ಳಿ.

xii. ಫಲಾನುಭವಿಗಳ ನೋಂದಣಿ ಮತ್ತು ಪರೀಕ್ಷೆಗೆ ಆಧಾರ್ ಸಂಪರ್ಕ ಒದಗಿಸಲು ಸೂಕ್ತ ವ್ಯವಸ್ಥೆಯನ್ನು ಅನುಸರಿಸಿ.

xiii. ಸಚಿವಾಲಯದ ಅನುಮತಿಯೊಂದಿಗೆ ಮೂರನೆಯ ವ್ಯಕ್ತಿಗಳಿಂದ ಯೋಜನೆಯ ಪರಿಣಾಮಗಳ ಅಧ್ಯಯನ ನಡೆಸಿ.

**ಅನುಬಂಧ-I**

**ಡಿಜಿಟಲ್ ಸಾಕ್ಷರತೆ ರಾಜ್ಯ/ಕೇಂದ್ರಾಡಳಿತವಾರು ಗುರಿ**

| ಕ್ರ.ಸಂ | ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು | ಗುರಿ |
|---|---|---|
| 1 | ಉತ್ತರ ಪ್ರದೇಶ | 11171000 |
| 2 | ಬಿಹಾರ | 6630000 |
| 3 | ಪಶ್ಚಿಮ ಬಂಗಾಳ | 4481000 |
| 4 | ಮಹಾರಾಷ್ಟ್ರ | 4433000 |
| 5 | ಮಧ್ಯಪ್ರದೇಶ | 3784000 |
| 6 | ರಾಜಸ್ಥಾನ | 3712000 |
| 7 | ಕರ್ನಾಟಕ | 2705000 |
| 8 | ತಮಿಳುನಾಡು | 2679000 |
| 9 | ಒರಿಸ್ಸಾ | 2517000 |
| 10 | ಗುಜರಾತ್ | 2497000 |
| 11 | ಆಂಧ್ರಪ್ರದೇಶ | 2028000 |
| 12 | ತೆಲಂಗಾಣ | 2028000 |
| 13 | ಅಸ್ಸಾಮ್ | 1929000 |
| 14 | ಜಾರ್ಖಂಡ್ | 1803000 |
| 15 | ಛತ್ತೀಸ್ ಗಢ | 1412000 |
| 16 | ಕೇರಳ | 1257000 |
| 17 | ಪಂಜಾಬ್ | 1247000 |
| 18 | ಹರ್ಯಾಣ | 1191000 |
| 19 | ಜಮ್ಮು ಮತ್ತು ಕಾಶ್ಮೀರ | 658000 |
| 20 | ಉತ್ತರಾಖಂಡ | 506000 |
| 21 | ಹಿಮಾಚಲ ಪ್ರದೇಶ | 444000 |
| 22 | ತ್ರಿಪುರ | 195000 |
| 23 | ಮೇಘಾಲಯ | 171000 |

| | | |
|---|---|---|
| 24 | ಮಣಿಪುರ | 137000 |
| 25 | ನಾಗಾಲ್ಯಾಂಡ್ | 101000 |
| 26 | ಅರುಣಾಚಲ ಪ್ರದೇಶ | 77000 |
| 27 | ಗೋವಾ | 40000 |
| 28 | ಮಿಝೋರಮ್ | 38000 |
| 29 | ಸಿಕ್ಕಿಂ | 33000 |
| 30 | ದೆಹಲಿ ಎನ್ ಸಿ ಟಿ | 30000 |
| 31 | ಪುದುಚೆರಿ | 28000 |
| 32 | ಅಂಡಮಾನ್ ಮತ್ತು ನಿಕೊಬಾರ್ | 18000 |
| 33 | ದಾದ್ರಾಮತ್ತು ನಾಗರ್ ಹವೇಲಿ | 13000 |
| 34 | ದಾಮನ್ ಮತ್ತು ಡಿಯೂ | 4000 |
| 35 | ಚಂಡೀಗಢ | 2000 |
| 36 | ಲಕ್ಷ್ಮದ್ವೀಪ | 1000 |
| | **ಒಟ್ಟು** | **60000000** |

**ಟಿಪ್ಪಣಿ: ಕಾರ್ಯ ಸಾಮರ್ಥ್ಯದ ಆಧಾರದ ಮೇಲೆ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಗುರಿ ವ್ಯತ್ಯಾಸವಾಗುತ್ತದೆ.**

ಅವ್ಯವಸ್ಥಿತವಾಗಿ ಒಟ್ಟಾದ ನಗರಗಳು ಈ ಯೋಜನೆಗೆ ಒಳಪಡುವುದಿಲ್ಲ (ಪಟ್ಟಿ ನೀಡಲಾಗಿದೆ)

**ಯೋಜನೆಯ ವ್ಯಾಪ್ತಿಗೆ ಬರದ ನಗರಗಳ ಪಟ್ಟಿ**

| ಕ್ರ.ಸಂ | ರಾಜ್ಯದ ಹೆಸರು | ನಗರದ ಹೆಸರು | ನಗರದ ಜನಸಂಖ್ಯೆ (2011ರ ಭಾರತ ಜನಗಣತಿ ಪ್ರಕಾರ) |
|---|---|---|---|
| 1 | ಮಹಾರಾಷ್ಟ್ರ | ಗ್ರೇಟರ್ ಮುಂಬೈ (ಮ.ಪಾಲಿಕೆ) | 1,24,78,447 |
| 2 | ದೆಹಲಿ | ಡಿಎಂಸಿ (ಯು) | 1,10,07,835 |
| 3 | ಕರ್ನಾಟಕ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) (ಮ.ಪಾಲಿಕೆ) | 84,25,970 |
| 4 | ಆಂಧ್ರಪ್ರದೇಶ | ಗ್ರೇಟರ್ ಹೈದರಾಬಾದ್(ಮ.ಪಾಲಿಕೆ) | 68,09,970 |
| 5 | ಗುಜರಾತ್ | ಅಹ್ಮದಾಬಾದ್ (ಮ.ಪಾಲಿಕೆ) | 55,70,585 |
| 6 | ತಮಿಳುನಾಡು | ಚೆನ್ನೈ (ಮ.ಪಾಲಿಕೆ) | 46,81,087 |
| 7 | ಪಶ್ಚಿಮ ಬಂಗಾಳ | ಕೋಲ್ಕತಾ (ಮ.ಪಾಲಿಕೆ) | 44,86,679 |
| 8 | ಗುಜರಾತ್ | ಸೂರತ್ (ಮ.ಪಾಲಿಕೆ) | 44,62,002 |
| 9 | ಮಹಾರಾಷ್ಟ್ರ | ಪುಣೆ (ಮ.ಪಾಲಿಕೆ) | 31,15,431 |
| 10 | ರಾಜಸ್ಥಾನ | ಜೈಪುರ್ (ಮ.ಪಾಲಿಕೆ) | 30,73,350 |
| 11 | ಉತ್ತರ ಪ್ರದೇಶ | ಲಖನೌ | 28,15,601 |

| | | | |
|---|---|---|---|
| 12 | ಉತ್ತರ ಪ್ರದೇಶ | ಕಾನ್ ಪುರ್ (ಮ.ಪಾಲಿಕೆ) | 27,67,031 |
| 13 | ಮಹಾರಾಷ್ಟ್ರ | ನಾಗ್ ಪುರ್ (ಮ.ಪಾಲಿಕೆ) | 24,05,421 |
| 14 | ಮಧ್ಯಪ್ರದೇಶ | ಇಂದೋರ್ (ಮ.ಪಾಲಿಕೆ) | 19,60,631 |
| 15 | ಮಹಾರಾಷ್ಟ್ರ | ಥಾಣೆ (ಮ.ಪಾಲಿಕೆ) | 18,18,872 |
| 16 | ಮಧ್ಯಪ್ರದೇಶ | ಭೋಪಾಲ್ (ಮ.ಪಾಲಿಕೆ) | 17,95,648 |
| 17 | ಆಂಧ್ರಪ್ರದೇಶ | ಗ್ರೇಟರ್ ವಿಶಾಖಪಟ್ಟಂ (ಮ.ಪಾಲಿಕೆ) | 17,30,320 |
| 18 | ಮಹಾರಾಷ್ಟ್ರ | ಪಿಂಪ್ರಿ-ಚಿಂಚವಾಡಾ (ಮ.ಪಾಲಿಕೆ) | 17,29,359 |
| 19 | ಬಿಹಾರ | ಪಾಟ್ನಾ (ಮ.ಪಾಲಿಕೆ) | 16,83,200 |
| 20 | ಗುಜರಾತ್ | ವಡೋದರಾ (ಮ.ಪಾಲಿಕೆ) | 16,66,703 |
| 21 | ಪಂಜಾಬ್ | ಲುಧಿಯಾನಾ (ಮ.ಪಾಲಿಕೆ) | 16,13,878 |
| 22 | ಉತ್ತರ ಪ್ರದೇಶ | ಆಗ್ರಾ (ಮ.ಪಾಲಿಕೆ) | 15,74,542 |
| 23 | ಮಹಾರಾಷ್ಟ್ರ | ನಾಸಿಕ್ (ಮ.ಪಾಲಿಕೆ) | 14,86,973 |
| 24 | ಹರ್ಯಾಣ | ಫರೀದಾಬಾದ್ (ಮ.ಪಾಲಿಕೆ) | 14,04,653 |
| 25 | ಉತ್ತರ ಪ್ರದೇಶ | ಮೀರತ್ (ಮ.ಪಾಲಿಕೆ) | 13,09,023 |
| 26 | ಗುಜರಾತ್ | ರಾಜ್ ಕೋಟ್ (ಮ.ಪಾಲಿಕೆ) | 12,86,995 |
| 27 | ಮಹಾರಾಷ್ಟ್ರ | ಕಲ್ಯಾಣ್- ಡೊಂಬಿವಲಿ (ಮ.ಪಾಲಿಕೆ) | 12,46,381 |
| 28 | ಮಹಾರಾಷ್ಟ್ರ | ವಾಸ್ಯೆ ವಿರಾರ್ ನಗರ (ಮ.ಪಾಲಿಕೆ) | 12,21,233 |
| 29 | ಉತ್ತರ ಪ್ರದೇಶ | ವಾರಾಣಸಿ (ಮ.ಪಾಲಿಕೆ) | 12,01,815 |
| 30 | ಜಮ್ಮು ಮತ್ತು ಕಾಶ್ಮೀರ_ | ಶ್ರೀನಗರ್ (ಮ.ಪಾಲಿಕೆ) | 11,92,792 |
| 31 | ಮಹಾರಾಷ್ಟ್ರ | ಔರಂಗಾಬಾದ್ (ಮ.ಪಾಲಿಕೆ) | 11,71,330 |
| 32 | ಜಾರ್ಖಂಡ್ | ಧನ್ ಬಾದ್ (ಮ.ಪಾಲಿಕೆ) | 11,61,561 |
| 33 | ಪಂಜಾಬ್ | ಅಮೃತ್ ಸರ್ (ಮ.ಪಾಲಿಕೆ) | 11,32,761 |
| 34 | ಮಹಾರಾಷ್ಟ್ರ | ನವ ಮುಂಬೈ (ಮ.ಪಾಲಿಕೆ) | 11,19,477 |
| 35 | ಉತ್ತರ ಪ್ರದೇಶ | ಅಲಹಾಬಾದ್ (ಮ.ಪಾಲಿಕೆ) | 11,17,094 |
| 36 | ಜಾರ್ಖಂಡ್ | ರಾಂಚಿ(ಮ.ಪಾಲಿಕೆ) | 10,73,440 |
| 37 | ಪಶ್ಚಿಮ ಬಂಗಾಳ | ಹೌರಾ (ಮ.ಪಾಲಿಕೆ) | 10,72,161 |
| 38 | ತಮಿಳು ನಾಡು | ಕೊಯಮತ್ತೂರು (ಮ.ಪಾಲಿಕೆ) | 10,61,447 |
| 39 | ಮಧ್ಯಪ್ರದೇಶ | ಜಬಲ್ ಪುರ್ (ಮ.ಪಾಲಿಕೆ) | 10,54,336 |
| 40 | ಮಧ್ಯಪ್ರದೇಶ | ಗ್ವಾಲಿಯರ್ (ಮ.ಪಾಲಿಕೆ) | 10,53,505 |
| 41 | ಆಂಧ್ರಪ್ರದೇಶ | ವಿಜಯವಾಡ (ಮ.ಪಾಲಿಕೆ) | 10,48,240 |
| 42 | ರಾಜಸ್ಥಾನ | ಜೋಧ್ ಪುರ್ (ಮ.ಪಾಲಿಕೆ) | 10,33,918 |
| 43 | ತಮಿಳುನಾಡು | ಮದುರೈ (ಮ.ಪಾಲಿಕೆ) | 10,16,885 |
| 44 | ಛತ್ತೀಸ್ ಗಡ | ರಾಯ್ ಪುರ್ (ಮ.ಪಾಲಿಕೆ) | 10,10,087 |
| 45 | ರಾಜಸ್ತಾನ | ಕೋಟಾ (ಮ.ಪಾಲಿಕೆ) | 10,01,365 |
| 46 | ಅಸ್ಸಾಮ್ | ಗುವಾಹಟಿ (ಮ.ಪಾಲಿಕೆ) | 9,63,429 |
| 47 | ಚಂಡೀಗಡ | ಚಂಡೀಗಡ(ಮ.ಪಾಲಿಕೆ) | 9,60,787 |
| 48 | ಮಹಾರಾಷ್ಟ್ರ | ಸೋಲಾಪುರ್(ಮ.ಪಾಲಿಕೆ) | 9,51,118 |

| | | | |
|---|---|---|---|
| 49 | ಕರ್ನಾಟಕ | ಹುಬ್ಬಳ್ಳಿ-ಧಾರವಾಡ*(ಮ.ಪಾಲಿಕೆ) | 9,43,857 |
| 50 | ಉತ್ತರ ಪ್ರದೇಶ | ಬರೇಲಿ (ಮ.ಪಾಲಿಕೆ) | 8,98,167 |

**ಅನುಬಂಧ-II**

**ಪಿಎಂಜಿಡಿಐಎಸ್ ಎಚ್ಎ ಅಡಿ ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳು ರಚಿಸಲಿರುವ ಸಮಿತಿಗಳು**

**I. ರಾಜ್ಯಮಟ್ಟದ ಸಮಿತಿ – [ರಾಜ್ಯದ ಮುಖ್ಯಕಾರ್ಯದರ್ಶಿ/ಕೇಂದ್ರಾಡಳಿತ ಪ್ರದೇಶದ ಆಡಳಿತಾಧಿಕಾರಿಯಿಂದಿ ರಚನೆ]**

ಸಂಯೋಜನೆ

**ಅಧ್ಯಕ್ಷರು – ಪ್ರಧಾನ ಕಾರ್ಯದರ್ಶಿ (ಮಾಹಿತಿ ತಂತ್ರಜ್ಞಾನ)**
**ಸದಸ್ಯರು:**

1. ಮೂಲ ಶಿಕ್ಷಣ ಇಲಾಖೆ ಪ್ರತಿನಿಧಿ
2. ಪಂಚಾಯತ್ ರಾಜ್ ಇಲಾಖೆ ಪ್ರತಿನಿಧಿ
3. ಸಮಾಜ ಕಲ್ಯಾಣ ಇಲಾಖೆ ಪ್ರತಿನಿಧಿ
4. ಮಹಿಳಾ ಮತ್ತು ಮಕ್ಕಳಾಭಿವೃದ್ಧಿ ಇಲಾಖೆ ಪ್ರತಿನಿಧಿ
5. ರಾಜ್ಯ ಜಾರಿ ಸಮಿತಿ (ಎಸ್ ಐ ಎ)
6. ರಾಜ್ಯ ಮಾಹಿತಿ ಅಧಿಕಾರಿ - ಎಸ್ ಐ ಒ, ಎನ್ ಐಸಿ,
7. ಸಿಎಸ್'ಸಿ-ಎಸ್'ಪಿವಿ ಪ್ರತಿನಿಧಿ
8. ವಿಶೇಷ ಕಾರ್ಯದರ್ಶಿ( ಐಟಿ)/ಜಂಟಿ ಕಾರ್ಯದರ್ಶಿ (ಐಟಿ) -ಸದಸ್ಯ ಕಾರ್ಯದರ್ಶಿ

- ಸಮಿತಿಯು ಅಧ್ಯಕ್ಷರ ಅನುಮತಿ ಮೇರೆಗೆ ಸೂಕ್ತವೆಂದು ಭಾವಿಸಿದ್ದಲ್ಲಿ ಕೆಲವು ವ್ಯಕ್ತಿಗಳನ್ನು ವಿಶೇಷ ಆಹ್ವಾನಿತರನ್ನಾಗಿ ಸಭೆಗಳಿಗೆ ಆಹ್ವಾನಿಸಬಹುದು.

ಪರಾಮರ್ಶೆಯ ನಿಬಂಧನೆಗಳು

- ಸಮಿತಿಯ ಪರಾಮರ್ಶೆಯ ನಿಬಂಧನೆಗಳು ಈ ಕೆಳಗಿನಂತಿವೆ:
  - ರಾಜ್ಯದಲ್ಲಿ ಪಿಎಂಜಿಡಿಐಎಸ್'ಎಚ್'ಎ ಯೋಜನೆಯ ಜಾರಿಯನ್ನು ಚುರುಕುಗೊಳಿಸುವುದು ಮತ್ತು ನಿಗಾಡುವುದು.
  - ರಾಜ್ಯದಲ್ಲಿ ಯೋಜನೆಯ ಜಾ ರಿಯಲ್ಲಿ ಭಾಗಿಯಾದ ತರಬೇತಿ ಕೇಂದ್ರಗಳು /ಪಾಲುದಾರರು ಎದುರಿಸಿದ ಸಮಸ್ಯೆ/ಕಾರ್ಯಪ್ರಗತಿಯ ಕ್ರಮಕ್ಕೆ ಶಿಫಾರಸು ಮಾಡುವುದು.
  - ರಾಜ್ಯದಲ್ಲಿ ಯೋಜನೆಗೆ ಜಾರಿಗೆ ಸಂಬಂಧಿಸಿದ ಯಾವುದೇ ವಿಷಯವಿದ್ದರೂ ಗಮನಿಸುವುದು
- ಸಮಿತಿ ಕನಿಷ್ಟ ಎರಡು ತಿಂಗಳಿಗೆ ಒಮ್ಮೆಯಾದರೂ ಸಭೆ ನಡೆಸುವುದು

**II. ಜಿಲ್ಲಾಮಟ್ಟದ ಸಮಿತಿ- [ರಾಜ್ಯ/ಕೇಂದ್ರಾಡಳಿತ ಪ್ರದೇಶದಿಂದ ರಚನೆ]**

ಸಂಯೋಜನೆ

**ಅಧ್ಯಕ್ಷರು – ಜಿಲ್ಲಾ ಮ್ಯಾಜಿಸ್ಟ್ರೇಟರ್/ ಕಲೆಕ್ಟರ್**
**ಸದಸ್ಯರು:**

1. ಮೂಲ ಶಿಕ್ಷಣ ಇಲಾಖೆ ಪ್ರತಿನಿಧಿ
2. ಮಹಿಳಾ ಮತ್ತು ಮಕ್ಕಳಾಭಿವೃದ್ಧಿ ಇಲಾಖೆ ಪ್ರತಿನಿಧಿ
3. ರಾಜ್ಯ ಇ-ಆಡಳಿತ ಸಮಾಜದ ಪ್ರತಿನಿಧಿ
4. ಜಿಲ್ಲಾ ಮಾಹಿತಿ ಅಧಿಕಾರಿ - ಡಿಐಒ
5. ಬ್ಲಾಕ್ ಅಭಿವೃದ್ಧಿ ಅಧಿಕಾರಿ
6. ಜಿಲ್ಲಾ ಪಂಚಾಯತ್ ಸಿಇಒ
7. ಜಿಲ್ಲಾ ಸಮನ್ವಯಾಧಿಕಾರಿ, ಸಿಎಸ್‌ಸಿ-ಎಸ್‌ಪಿವಿ - ಸದಸ್ಯ ಕಾರ್ಯದರ್ಶಿ

- ಸಮಿತಿಯು ಅಧ್ಯಕ್ಷರ ಅನುಮತಿ ಮೇರೆಗೆ ಸೂಕ್ತವೆಂದು ಭಾವಿಸಿದ್ದಲ್ಲಿ ಕೆಲವು ವ್ಯಕ್ತಿಗಳನ್ನು ವಿಶೇಷ ಆಹ್ವಾನಿತರನ್ನಾಗಿ ಸಭೆಗಳಿಗೆ ಆಹ್ವಾನಿಸಬಹುದು.

**<u>ಪರಾಮರ್ಶೆಯ ನಿಬಂಧನೆಗಳು</u>**

- ಸಮಿತಿ ಪರಾಮರ್ಶೆಯ ನಿಬಂಧನೆಗಳು ಈ ಕೆಳಗಿನಂತಿವೆ:
  - ತಳಮಟ್ಟದಲ್ಲಿ ಯೋಜನೆಯ ಜಾರಿಯ ನಿಗಾ ಇಡುವುದು/ ಮೇಲ್ವಿಚಾರಣೆ ನಡೆಸುವುದು
  - ಜಿಲ್ಲೆ/ಬ್ಲಾಕ್ ಮಟ್ಟದಲ್ಲಿ ಯೋಜನೆಯ ಜಾರಿಯಲ್ಲಿ ಭಾಗಿಯಾದ ತರಬೇತಿ ಕೇಂದ್ರಗಳು /ಪಾಲುದಾರರು ಎದುರಿಸಿದ ಸಮಸ್ಯೆ/ಕಾರ್ಯಪ್ರಗತಿಯ ಕ್ರಮಕ್ಕೆ ಶಿಫಾರಸು ಮಾಡುವುದು.
  - ಜಿಲ್ಲೆ/ಬ್ಲಾಕ್ ಮಟ್ಟದಲ್ಲಿ ಯೋಜನೆಗೆ ಜಾರಿಗೆ ಸಂಬಂಧಿಸಿದ ಯಾವುದೇ ವಿಷಯವಿದ್ದರೂ ಗಮನಿಸುವುದು
- ಸಮಿತಿ ಕನಿಷ್ಠ ಎರಡು ತಿಂಗಳಿಗೆ ಒಮ್ಮೆಯಾದರೂ ಸಭೆ ನಡೆಸುವುದು